**<u>ದಿಃ 19.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಪ್ರಮಾಣೀಕರಿಸಿರುತ್ತಾರೆ.</u>**

**<u>ಮುಂದುವರೆದ ಮುಖ್ಯ ವಿಚಾರಣೆ ಶ್ರೀ.ಆರ್.ಎ.ಎಂ ವಕೀಲರಿಂದಃ ವಾದಿಯ ಪರವಾಗಿಃ</u>**

**6)** ದಾವೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಪ್ರತಿವಾದಿ **1** ಮತ್ತು **2** ರವರು ಬರೆದುಕೊಟ್ಟಿರುವ ಕರಾರು ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ಗುರುತಿಸಿದ್ದು, ಈ ಹಂತದಲ್ಲಿ ಪ್ರತಿವಾದಿ ವಕೀಲರು ಸ್ಟಾಂಪ ಡ್ಯೂಟಿಯ ಮೇಲೆ ತಕರಾರು ಮಾಡಿರುತ್ತಾರೆ. ಆದ್ದರಿಂದ ಸ್ಟಾಂಪ ಡ್ಯೂಟಿಯ ಮೇಲೆ ವಾದವನ್ನು ಆಲಿಸಲು ಮುಂದೂಡಲಾಯಿತು. ದಾವಾ ಆಸ್ತಿಯ ಪಹಣಿ ಪತ್ರಿಕೆ ಮತ್ತು ಮ್ಯೂಟೇಶನ ಪ್ರತಿಯನ್ನು ಗುರುತಿಸಿದ್ದು, ಅವುಗಳನ್ನು ನಿ.ಪಿ-**1** ಮತ್ತು ನಿ.ಪಿ-**2** ಎಂದು ಗುರುತಿಸಲಾಯಿತು. ವಕೀಲರ ನೋಟಿಸಿನ ಪ್ರತಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ-**3** ಎಂದು, **4** ಅಂಚೆ ರಶೀದಿಗಳನ್ನು ಗುರುತಿಸಿದ್ದು, ಅವುಗಳನ್ನು ಒಟ್ಟಿಗೆ ನಿ.ಪಿ-**4** ಎಂದು ಗುರುತಿಸಲಾಯಿತು. ಮೂರು ಅಂಚೆ ಸ್ವೀಕೃತಿ ಪ್ರತಿಗಳನ್ನು ಗುರುಸಿತಿದ್ದು, ಅವುಗಳನ್ನು ನಿ.ಪಿ-**5** ರಿಂದ ನಿ.ಪಿ-**7** ಎಂದು ಗುರುತಿಸಲಾಯಿತು. ವಾಪಾಸು ಬಂದಿರುವ ಅಂಚೆ ಲಕೋಟೆಯನ್ನು ಗುರುತಿಸಿದ್ದು , ಅದನ್ನು ನಿ.ಪಿ-**8** ಎಂದು ಗುರುತಿಸಲಾಯಿತು. ಅದನ್ನು ಒಡೆದು ನೋಡಿ ಅದರಲ್ಲಿನ ನೋಟಿಸನ್ನು ನಿ.ಪಿ-**9** ಎಂದು, **4** ನೇ ಪ್ರತಿವಾದಿಯ ಹೆಸರಿಗೆ ನೊಂದಣಿಯಾಗಿರುವ ಖರೀದಿ ಪತ್ರದ ಪ್ರತಿಯನ್ನು ಮತ್ತು ಉಪನೊಂದಣಾಧಿಕಾರಿಯವರ ಪ್ರಮಾಣ ಪತ್ರವನ್ನು ಗುರುತಿಸಿದ್ದು, ಅವುಗಳನ್ನು ನಿ.ಪಿ-**10** ಮತ್ತು ನಿ.ಪಿ-**11** ಎಂದು ಗುರುತಿಸಲಾಯಿತು. **1** ಮತ್ತು **2** ನೇ ಪ್ರತಿವಾದಿಯರ ಪರವಾಗಿ ನೀಡಿರುವ ಮರುತ್ತರವನ್ನು ನಿ.ಪಿ-**12** ಎಂದು, **4** ನೇ ಪ್ರತಿವಾದಿಯ ಪರವಾಗಿ ನೀಡಿರುವ ಮರುತ್ತರದ ನೋಟಿಸನ್ನು ನಿ.ಪಿ-**13** ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ,ಹಾವೇರಿ.